







ಮುಂದಿನ ಗುರುತರವಾದ ಕೆಲಸ. ಚಿತ್ತಾರದ ಆಕಾರಕ್ಕೆ ಹಾಗೂ ಗಾತ್ರಕ್ಕೆ ಸರಿಯಾಗಿ ಈ ಶಿಲೆಗಳನ್ನು ಚಾಣದಲ್ಲಿ ಕೊರೆಯಬೇಕು. (ಇದು ಎಷ್ಟು ಕರಾರುವಾಕ್ಕಾಗಿ ಇರಬೇಕೆಂದರೆ ಚಿತ್ತಾರವನ್ನು ಅದರ ಮೇಲೆ ಕೂರಿಸಿದಾಗ ಅದು ಅಮೃತಶಿಲೆಯಲ್ಲೇ ಉದ್ಭವವಾದ ಹಾಗೆ ಕಾಣಬೇಕು.)

ನಂತರ ಮದರಂಗಿಯಿಂದ ಮಾಡಿದ ಅಂಟನ್ನು ಅಮೃತಶಿಲೆಯಲ್ಲಿ ಕೊರೆದ ಒಳಲೆಯೊಳಗೆ ತೆಳುವಾಗಿ ಬಳಿದು ಅದರ ಮೇಲೆ ಚಿತ್ತಾರದ ಬಿಡಿಭಾಗಗಳನ್ನು ಕೂಡಿಸಲಾಗುವುದು. ಈ ಅಂಟು ಅಷ್ಟು ಬೇಗ ಗಟ್ಟಿಯಾಗದಿರುವುದರಿಂದ ಚಿತ್ತಾರದ ಬಿಡಿ ಭಾಗಗಳನ್ನು ಅಲ್ಪ ಸ್ವಲ್ಪ ಹೊಂದಾಣಿಕೆ ಮಾಡಲೂ ಸಮಯವಿರುತ್ತದೆ. ಇದರ ನಂತರ  ತಾತ್ಕಾಲಿಕವಾಗಿ ಕೂಡಿಸಿರುವ ಈ ಚಿತ್ತಾರಕ್ಕೆ ಅಂತಿಮ ಸ್ಪರ್ಶ ಕೊಡುವ ಕೆಲಸ ಪ್ರಾರಂಭವಾಗುತ್ತದೆ.

ಅಂತಿಮ ಸ್ಪರ್ಶಕ್ಕೂ ಮುನ್ನ ವಜ್ರಸರಿ ಎಂಬ ಬಲವಾದ ಬಂಧದ ಮಿಶ್ರಣ ತಯಾರು ಮಾಡಿಕೊಳ್ಳುತ್ತಾರೆ. ಈ ವಜ್ರಸರಿಗೆ ಅವಶ್ಯವಿರುವ ವಸ್ತುಗಳೆಂದರೆ ತೆಳುಬೆಲ್ಲ, ಜೇನುಮೇಣ, ಜೇನುತುಪ್ಪ, ಲಿಂಬೆರಸ, ಅಮೃತಾಶಿಲಾ ಪುಡಿ ಹಾಗೂ ದ್ವಿದಳ ಧಾನ್ಯಗಳು. ಈ ಎಲ್ಲಾ ವಸ್ತುಗಳು ಸೇರಿದ ಮಿಶ್ರಣವನ್ನು ಚೆನ್ನಾಗಿ ಅರೆದ ನಂತರ ಅದನ್ನು ಚಿತ್ತಾರಗಳ ಮೇಲೆ ಲೇಪಿಸುತ್ತಾರೆ. ಬಂಧವು ಗಟ್ಟಿಯಾದ ನಂತರ ಇದಕ್ಕಾಗಿ ನಿಗದಿ ಪಡಿಸಿದ ಸಾಣೆಕಲ್ಲಿನ ಚೂರಿನಿಂದ ನಿರಂತರವಾಗಿ ಉಜ್ಜುತ್ತಾರೆ. ಇದರಿಂದಾಗಿ ಚಿತ್ತಾರದ ಯಾವುದಾದರೂ ಭಾಗ ಅಲ್ಪ ಸ್ವಲ್ಪ ಹೊರಬಂದಿದ್ದರೆ ಅದು ಅಮೃತಶಿಲೆಯ ಪಟ್ಟಿಕೆಯೊಳಗೇ ಐಕ್ಯವಾಗುವುದರ ಜೊತೆಗೆ ಹೊಳಪನ್ನೂ ಪಡೆಯುತ್ತದೆ.

ಪಾರ್ಚಂಕಾರಿ ಕಲೆಯು ಮೂಲತಃ ಭಾರತದಲ್ಲಿ ಉಗಮವಾದದ್ದಲ್ಲ ಎಂದು ಹೇಳುತ್ತಾರೆ. ಇದು ಹದಿನಾರನೇ ಶತಮಾನದ ಪೂರ್ವದಲ್ಲೇ ರೋಂನಲ್ಲಿ ಜನ್ಮ ತಳೆಯಿತೆಂದು ತಿಳಿದು ಬರುತ್ತದೆ. ನಂತರ ಫ್ಲಾರೆನ್ಸ್‌ನಲ್ಲಿ ಇದು ಬಹಳ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿತು.